O.S .No. 234/2020

ಪಿ.ಡಬ್ಲ್ಯೂ-1

ದಿನಾಂಕ: 25.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಪಿ.ಎಂ.ಎನ್. ವಕೀಲರಿಂದಃ

ನೀವು ದಿಃ 19.02.2000 ರಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದಾರೆಂದು 3 ನೇ ಪ್ರತಿವಾದಿಯ ವಿರುದ್ಧ ದಾವೆ ಹೂಡಿರುತ್ತೀರಿ ಎಂದರೆ ಸರಿ. ಸದರಿ ದಾವೆಯನ್ನು ನಿಮ್ಮ ತಾಯಿ ಬಸಮ್ಮ ನಿಮ್ಮ ಸಹೋದರರಾದ ಸುರೇಶ, ವೆಂಕಟೇಶ ಮತ್ತು ಅವರ ಕುಟುಂಬದವರು ಸೇರಿ ಮಾರಾಟ ಮಾಡಿರುತ್ತಾರೆಂದು ಹೂಡಿರುತ್ತೀರಿ ಎಂದರೆ ಸರಿ. ದಾವಾ ಆಸ್ತಿಯನ್ನು ಮಾರಾಟ ಮಾಡಿದ ನಂತರ 3 ನೇ ಪ್ರತಿವಾದಿ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡು, ಅವರೇ ಅನುಭವ ಮಾಡುತ್ತಿದ್ದಾರೆಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವೆಯಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿಯನ್ನು ಕೊಟ್ಟಿದ್ದೀರೋ, ಇಲ್ಲವೋ ಎಂದರೆ ಸಾಕ್ಷಿ 1 ನೇ ವಾದಿ ಅದನ್ನೆಲ್ಲ ಒದಗಿಸಿರುತ್ತಾರೆ, ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ದಾವೆ ಯಾವ ಆಸ್ತಿಯ ವಿರುದ್ಧ, ಸದರಿ ಆಸ್ತಿ ಯಾರ ಹೆಸರಿನಲ್ಲಿ ಖಾತೆ ಇದೆ ಎಂಬ ವಿಚಾರ ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನನ್ನ ತಂದೆಯ ಹೆಸರಿನಲ್ಲಿತ್ತು ಎಂದು ಹೇಳುತ್ತಾರೆ. ದಾವಾ ಆಸ್ತಿ ನಿಮ್ಮ ತಂದೆ ಹೆಸರನಲ್ಲಿತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಏನು ದಾಖಲಾತಿ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿ ಅದು ಗೊತ್ತಿಲ್ಲ ಎಂದು ಹೇಳುತ್ತಾರೆ.

ಬಿಳಿಕರೆ ಹೋಬಳಿ, ಎಲಸವಾಡಿ ಗ್ರಾಮದಲ್ಲಿ ವಾಸವಾಗಿರುವ ದ್ಯಾವನಾಯಕ ಬಿನ್ ದ್ಯಾವನಾಯಕ ನಿಮಗೆ ಗೊತ್ತು ಎಂದರೆ ಸರಿ. ಬಿಳಿಕೆರೆ ಹೋಬಳಿ, ದಲ್ಲಾಳು ಗ್ರಾಮದಲ್ಲಿ ನಿಮ್ಮ ತಂದೆಗೆ ಸೇರಿದ ಸ.ನಂ.77 ರಲ್ಲಿ 2 ಎಕರೆ ಜಮೀನು ಇತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಆಸ್ತಿಯನ್ನು ನಿಮ್ಮ ತಾಯಿ ಹಾಗೂ ಸಹೋದರರು ಎಲಸವಾಡಿ ಗ್ರಾಮದಲ್ಲಿ ವಾಸವಾಗಿರುವ ದ್ಯಾವನಾಯಕ ಬಿನ್ ದ್ಯಾವನಾಯಕ ರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ದಾವೆ ಹೂಡುವ ಪೂರ್ವದಲ್ಲಿ ನೀವು ಹಾಗೂ ನಿಮ್ಮ ಸಹೋದರರು ಮಾತನಾಡಿಕೊಂಡು ದಾವೆ ಹೂಡಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಭಾಗ ಕೊಡುವಂತೆ ನೀವೇನು ಕೇಳಿಲ್ಲ ಎಂದರೆ ಸಾಕ್ಷಿ ಏನು ಗೊತ್ತಿಲ್ಲ, ಮಾರಾಟ ಮಾಡಲು ಹೋದಾಗ ಮಾರಾಟ ಮಾಡಿರುವ ವಿಚಾರ ಗೊತ್ತಾಯಿತು ಎಂದು ಹೇಳುತ್ತಾರೆ. ನೀವು ಮದುವೆಯಾದ ನಂತರ ಭಾಗಾಂಶದ ವಿಚಾರವಾಗಿ ನಿಮ್ಮ ಸಹೋದರರೊಂದಿಗೆ ಮಾತನಾಡಿಲ್ಲ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಪಟ್ಟ ಜಂಟಿ ಖಾತೆ ಇರುವ ದಾಖಲಾತಿಯನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು ಉಳುಮೆ ಮಾಡುವಗೊಸ್ಕರ ನಿಮ್ಮ ಸಹೋದರರಿಗೆ ಸಹಾಯ ಮಾಡುತ್ತಿದ್ದೀರಾ ಎಂದರೆ ಸಾಕ್ಷಿ ಅವರೇ 5000 ಹಣ ಕೊಟ್ಟು ಬೇರೆಯವರಿಂದ ಉಳುಮೆ ಮಾಡಿಸುತ್ತಿದ್ದರು ಎಂದು ಹೇಳುತ್ತಾರೆ. ಬೆಳೆದ ಬೆಳೆಯಲ್ಲಿ ನಿಮಗೇನಾದರೂ ಅಲ್ಪಸ್ವಲ್ಪ ಬೆಳೆ

ಕೊಡುತ್ತಿದ್ದರಾ ಎಂದರೆ ಸಾಕ್ಷಿ ಕೊಡುತ್ತಿದ್ದರು ಎಂದು ಹೇಳುತ್ತಾರೆ. ಭಾಗಾಂಶವಾಗಿ ಕೊಡುತ್ತಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿಯಲ್ಲಿನಂ ವಿಳಾಸ ನಿಮ್ಮ ಗಂಡನ ಮನೆ ಹೆಸರಿನಲ್ಲಿದೆ ಎಂದರೆ ಸರಿ. ನೀವು ಹಾಗೂ ನಿಮ್ಮ ಸಹೋದರರು ಒಟ್ಟಾಗಿ ದಾವಾ ಆಸ್ತಿಯನ್ನು ಉಳುಮೆ ಮಾಡಿಲ್ಲ ಎಂದರೆ ಸಾಕ್ಷಿ ನಾವು ಮದುವೆಯಾಗಿ ಗಂಡನ ಮನೆಗೆ ಹೋಗಿದ್ದೇವು ಎಂದು ಹೇಳುತ್ತಾರೆ.

ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಎಷ್ಟು ರೂ. ಗಳಿಗೆ ಖರೀದಿ ಮಾಡಿದ್ದಾರೆಂದು ವಿಚಾರ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನೀವಾಗಲೀ, ನಿಮ್ಮ ಸಹೋದರರಾಗಲೀ ದಾವಾ ಆಸ್ತಿಗೆ ಸಂಬಂಧಿಸಿದಂತೆ ಕಂದಾಯ ಪಾವತಿ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿ ದಾವಾ ಆಸ್ತಿ ಖರೀದಿಸಿ ಈಗ್ಗೆ 23 ವರ್ಷಗಳಾಗಿವೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವೆಯಲ್ಲಿ ನಿಮ್ಮ ತಂದೆಗೆ ನೀವು ಎಷ್ಟು ಜನ ಮಕ್ಕಳು ಎಂದು ತೋರಿಸಲು ವಂಶವೃಕ್ಷ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿ ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಮಾರಾಟದ ವಿಚಾರ ನಿಮಗೆ ಗೊತ್ತಿದ್ದರೂ, ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ದಾವಾ ಆಸ್ತಿ ಈಗ ಹೆಚ್ಚಿನ ಬೆಲೆ ಬಾಳುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಮಾರುಕಟ್ಟೆ ಬೆಲೆ ಹೆಚ್ಚಾಗಿದ್ದರಿಂದ, ಅನ್ಯತಾ ಪಾಯಿದೆ ಪಡೆಯುವ ಉದ್ದೇಶದಿಂದ ದಾವೆ ಹೂಡಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮಾರುಕಟ್ಟೆ ಬೆಲೆ ಹೆಚ್ಚಿರುವುದರಿಂದ ನೀವು ನ್ಯಾಯಾಲಯಕ್ಕೆ ಸರಿಯಾದ ಶುಲ್ಕ ಪಾವತಿ ಮಾಡಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿ 2000 ರಲ್ಲೇ ಮಾರಾಟವಾಗಿರುವುದರಿಂದ, ನಿಮಗೆ ದಾವಾ ಆಸ್ತಿಯಲ್ಲಿ ಭಾಗ ಕೇಳುವ ಹಕ್ಕು ಇಲ್ಲ ಎಂದರೆ ಸಾಕ್ಷಿ ಹಕ್ಕು ಇದೆ ಎಂದು ಹೇಳುತ್ತಾರೆ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.